# ಜೈನ್ ಕಾಲೇಜಿನಲ್ಲಿ ಮೇಳೈಸಿದ ಸಂಗೀತಮಯ 'ಕನ್ನಡ ಹಬ್ಬ'

ಸಂಗೀತ! ಸಂಗೀತ!! ಸಂಗೀತ!!! ಜೈನ್ ಕಾಲೇಜಿನ ಮೂಲೆ ಮೂಲೆಯಲ್ಲೂ ಕನ್ನಡ ಸಾಹಿತ್ಯ ಸಂಗೀತದ್ದೆ ನಾದ – ನಿನಾದ . . ಕನ್ನಡ ನಾಡಗೀತೆಯ ಸುಧೆಯಿಂದ ಹಿಡಿದು ಕನ್ನಡ ಭಾವಗೀತೆಯ ಭಾವಾಂತರಾಳದ ಇನಿ ದನಿಯವರೆಗೆ ಕನ್ನಡ ಮಧುರ ಗೀತೆಗಳು, ಜೈನ್ ಕಾಲೇಜಿನ ಕನ್ನಡ ಹಬ್ಬದಲ್ಲಿ ನೆರೆದಿದ್ದ ಪ್ರತಿಯೊಬ್ಬರ ಮನದಲ್ಲೂ 'ಕನ್ನಡ ದೀಪ' ಬೆಳಗಿತು. ಕನ್ನಡ ಭಾಷೆಯ ಪ್ರಸರಣ ಹಾಗೂ ಕನ್ನಡತನವನ್ನು ಜಾಗೃತಗೊಳಿಸುವ ಉದ್ದೇಶದಿಂದ ಅರ್ಥಪೂರ್ಣವಾಗಿ ಹಮ್ಮಿಕೊಳ್ಳಲಾಗಿದ್ದ **'ಕನ್ನಡ ಹಬ್ಬ'** ಕಾರ್ಯಕ್ರಮವು ಸಾಂಸ್ಕೃತಿಕ ಸೇತುವೆಯಾಗಿ ಮೂಡಿಬಂದದ್ದು ಈ ಬಾರಿಯ ವಿಶೇಷ.

"ನನ್ನ ಜೀವನದಲ್ಲಿ ಮೊಟ್ಟ ಮೊದಲ ಬಾರಿಗೆ ಇಂತಹ ಒಂದು ಕನ್ನಡ ಸುಗ್ಗಿಗೆ ಸಾಕ್ಷಿಯಾದೆ. ನಿಜಕ್ಕೂ ನನ್ನ ಪಾಲಿಗೆ ಇದು ನೆನಪಿನ ಹಬ್ಬ!" ಎಂದು ಮಾತನಾಡಲು ಮೊದಲಿಟ್ಟರು, ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಆಗಮಿಸಿದ್ದಂತಹ ಖ್ಯಾತ ಹಿನ್ನೆಲೆ ಗಾಯಕರು ಹಾಗೂ ನಟರು ಆದಂತಹ ಶ್ರೀಯುತ ರಾಜೇಶ್ ಕೃಷ್ಣನ್‌ರವರು. ಒಂದು ಭಾಷೆಯ ಜೀವಾಳವೆ ಸಂಗೀತ. ಇಂತಹ ಸಂಗೀತವನ್ನು ಪ್ರತಿ ಕನ್ನಡಿಗರನ್ನು ತಲುಪಿಸುವಲ್ಲಿ ಜೈನ್ ಕಾಲೇಜಿನ ಕನ್ನಡ ಹಬ್ಬದಂತಹ ಕಾರ್ಯಕ್ರಮಗಳು ಅತಿ ಮುಖ್ಯ ಪಾತ್ರವನ್ನುವಹಿಸುತ್ತದೆ. ಸಾಧನೆಗೆ ಸತತ ಅಭ್ಯಾಸವೇ ದಿಕ್ಸೂಚಿ! ಇಂದಿನ ಸಂಗೀತ ಕ್ಷೇತ್ರದಲ್ಲಿ, ಯುವಪ್ರತಿಭೆಗಳು ತಮ್ಮ ಛಾಪನ್ನು ಮೂಡಿಸಬೇಕಾದರೆ, ಸತತ ಅಭ್ಯಾಸದ ಸಹಾಯದಿಂದ ಮಾತ್ರ ಸಾಧ್ಯ! ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತನ್ನು ಹೇಳಿದರು.

**ವಿದ್ಯಾರ್ಥಿಗಳು ನಡೆಸಿಕೊಟ್ಟ ಭರತನಾಟ್ಯ, ಜನಪದ ನೃತ್ಯ,ಭಾವಗೀತಾ ಗಾಯನ, ಸಿನೆಮಾ ಗಾಯನ ಮತ್ತು ವಾದ್ಯವೃಂದ ಕಾರ್ಯಕ್ರಮಗಳು ಪ್ರೇಕ್ಷಕರನ್ನು ಮನಸೆಳೆದವು.**

ಕಾರ್ಯಕ್ರಮದಲ್ಲಿ ಡಾ. ಬಿ ಟಿ ವೆಂಕಟೇಶ್, ನಿರ್ದೇಶಕರು, ಪಿ ಯು ಪ್ರೋಗ್ರಾಮ್, ಡಾ. ಎಸ್ ಎನ್ ನಟರಾಜ್, ಪ್ರಾಂಶುಪಾಲರು, ಜೈನ್ ಕಾಲೇಜು, ವಿ ವಿ ಪುರಂ ಮೊದಲಾದವರು ಉಪಸ್ಥಿತರಿದ್ದರು.